## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 545 |
| 3 | ಉತ್ತರಿಸಬೇಕಾದ ದಿನಾಂಕ | : | 11-12-2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ ಪ್ರಜೆಗಳು-27 ಬಾಂಗ್ಲಾದೇಶ ಪ್ರಜೆಗಳು-319 ಮತ್ತು ರೋಹಿಂಗ್ಯಾ ಮುಸ್ಲಿಮರು-168, ಒಟ್ಟು ಸಂಖ್ಯೆ 514 ಜನರಿದ್ದು, ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th>ಘಟಕ</th><th>ಪಾಕಿಸ್ತಾನಿ ಪ್ರಜೆಗಳು</th><th>ಬಾಂಗ್ಲಾದೇಶ ಪ್ರಜೆಗಳು</th><th>ರೋಹಿಂಗ್ಯಾ ಮುಸ್ಲಿಂಮರು</th></tr>
<tr><td>ಬೆಂಗಳೂರು ನಗರ</td><td>02</td><td>265</td><td>168</td></tr>
<tr><td>ಮಂಗಳೂರು ನಗರ</td><td>0</td><td>3</td><td>0</td></tr>
<tr><td>ಬೆಂಗಳೂರು ಜಿಲ್ಲೆ</td><td>24</td><td>29</td><td>0</td></tr>
<tr><td>ಕೋಲಾರ</td><td>0</td><td>12</td><td>0</td></tr>
<tr><td>ಉಡುಪಿ</td><td>0</td><td>10</td><td>0</td></tr>
<tr><td>ಉತ್ತರ ಕನ್ನಡ</td><td>1</td><td>0</td><td>0</td></tr>
<tr><td>ಒಟ್ಟು</td><td>27</td><td>319</td><td>168</td></tr>
</table></td></tr>
<tr><td>ಆ)</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಇವರು ಧರ್ಮದ ಹೆಸರಿನಲ್ಲಿ ನಡೆಯುವ ದೊಂಬಿ ಮತ್ತು ಗಲಭೆಗಳಲ್ಲಿ ನೇರವಾಗಿ ಭಾಗಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರು ಧರ್ಮದ ಹೆಸರಿನಲ್ಲಿ ನಡೆಯುವ ದೊಂಬಿ ಮತ್ತು ಗಲಭೆಗಳಲ್ಲಿ ನೇರವಾಗಿ ಭಾಗಿಯಾಗಿರುವ ಕುರಿತು ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.</td></tr>
<tr><td>ಇ)</td><td>ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ನಡೆದಿರುವ ಕ್ರಿಮಿನಲ್ ಪ್ರಕರಣಗಳಲ್ಲಿ ಅಕ್ರಮವಾಗಿ ನೆಲೆಸಿರುವ ಎಷ್ಟು ಜನ ಮುಸ್ಲಿಮರು ಭಾಗಿಯಾಗಿದ್ದಾರೆ; ಎಷ್ಟು ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆಯಾಗಿದೆ;</td><td>ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ನಡೆದಿರುವ ಒಟ್ಟು 23 ಕ್ರಿಮಿನಲ್ ಪ್ರಕರಣಗಳಲ್ಲಿ ಅಕ್ರಮವಾಗಿ ನೆಲೆಸಿರುವ ಒಟ್ಟು 77 ಮುಸ್ಲಿಮರು ಭಾಗಿಯಾಗಿರುತ್ತಾರೆ.<br><br>04 ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದ ಒಟ್ಟು 08 ಜನ ಆರೋಪಿತರಿಗೆ ಶಿಕ್ಷೆಯಾಗಿದೆ.</td></tr>
</table>

<table>
<tr>
<td>ಈ)</td>
<td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೊಹಿಂಗ್ಯಾ ಮುಸ್ಲಿಂಮರು ಭಾರತದ ಪ್ರಜೆಗಳಾಗದೇ ಇರುವುದರಿಂದ ಸರ್ಕಾರವು ನೀಡುವ ಉಚಿತ ಸೌಲಭ್ಯಗಳಾದ ಆರೋಗ್ಯ, ಶಿಕ್ಷಣ, ಅನ್ನಭಾಗ್ಯ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿರುವುದರಿಂದ ರಾಜ್ಯದ ಬಡ ಜನರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು:</td>
<td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶ ಮತ್ತು ರೋಹಿಂಗ್ಯಾ ಮುಸ್ಲಿಮರು ಸರ್ಕಾರವು ನೀಡುವ ಉಚಿತ ಸೌಲಭ್ಯಗಳಾದ ಆರೋಗ್ಯ, ಶಿಕ್ಷಣ, ಆಹಾರದಂತಹ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿರುವುದರಿಂದ, ರಾಜ್ಯದ ಬಡಜನರಿಗೆ ಅನ್ಯಾಯವಾಗುತ್ತಿರುವುದು ಕಂಡುಬಂದಿರುವುದಿಲ್ಲ, ಹಾಗೂ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.</td>
</tr>
<tr>
<td>ಉ)</td>
<td>ಕಳೆದ 2 ವರ್ಷಗಳಲ್ಲಿ ಎಷ್ಟು ಅಕ್ರಮ ವಲಸಿಗರನ್ನು ಗುರುತಿಸಲಾಗಿದೆ; ಎಷ್ಟು ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿದೆ; ಅಕ್ರಮ ವಲಸಿಗರ ಅಕ್ರಮ ವಾಸ್ತವ್ಯಕ್ಕೆ ಸಹಕರಿಸಿದ ಎಷ್ಟು ಜನರ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)</td>
<td>ಕಳೆದ 2 ವರ್ಷಗಳಲ್ಲಿ ಒಟ್ಟು 295 ಜನ ಅಕ್ರಮ ವಲಸಿಗರನ್ನು ಗುರುತಿಸಲಾಗಿದೆ, ಹಾಗೂ ಒಟ್ಟು 154 ಜನ ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿದ್ದು, ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th rowspan="2">ಘಟಕ</th><th colspan="3">ಕಳೆದ 2 ವರ್ಷಗಳಲ್ಲಿ ಗುರುತಿಸಲಾದ ಅಕ್ರಮ ವಲಸಿಗರ ಸಂಖ್ಯೆ</th><th colspan="3">ಕಳೆದ 2 ವರ್ಷಗಳಿಂದ ಗಡಿಪಾರು ಮಾಡಲಾದ ಅಕ್ರಮ ವಲಸಿಗರ ಸಂಖ್ಯೆ</th></tr>
<tr><th>2023</th><th>2024</th><th>2025</th><th>2023</th><th>2024</th><th>2025</th></tr>
<tr><td>ಬೆಂಗಳೂರು ನಗರ</td><td>106</td><td>48</td><td>50</td><td>41</td><td>32</td><td>33</td></tr>
<tr><td>ಮಂಗಳೂರು ನಗರ</td><td>-</td><td>01</td><td>01</td><td>-</td><td>01</td><td>01</td></tr>
<tr><td>ಬೆಂಗಳೂರು ಜಿಲ್ಲೆ</td><td>08</td><td>26</td><td>08</td><td>-</td><td>06</td><td>03</td></tr>
<tr><td>ಚಿತ್ರದುರ್ಗ</td><td>-</td><td>06</td><td>-</td><td>-</td><td>06</td><td>-</td></tr>
<tr><td>ಧಾರವಾಡ</td><td>-</td><td>01</td><td>01</td><td>-</td><td>01</td><td>01</td></tr>
<tr><td>ಹಾಸನ</td><td>-</td><td>03</td><td>-</td><td>-</td><td>-</td><td>03</td></tr>
<tr><td>ಕೋಲಾರ</td><td>-</td><td>-</td><td>12</td><td>-</td><td>-</td><td>12</td></tr>
<tr><td>ಶಿವಮೊಗ್ಗ</td><td>-</td><td>12</td><td>-</td><td>-</td><td>12</td><td>-</td></tr>
<tr><td>ಉಡುಪಿ</td><td>-</td><td>10</td><td>-</td><td>-</td><td>-</td><td>-</td></tr>
<tr><td>ಉತ್ತರ ಕನ್ನಡ</td><td>-</td><td>02</td><td>-</td><td>-</td><td>02</td><td>-</td></tr>
<tr><td>ಒಟ್ಟು</td><td>114</td><td>109</td><td>72</td><td>41</td><td>60</td><td>53</td></tr>
</table>
</td>
</tr>
</table>

ಅಕ್ರಮ ವಲಸಿಗರ ವಾಸ್ತವ್ಯಕ್ಕೆ ಸಹಕರಿಸಿದ ಒಟ್ಟು 06 ಜನರ ಮೇಲೆ ಒಟ್ಟು 05 ಪ್ರಕರಣ ದಾಖಲು ಮಾಡಲಾಗಿದ್ದು, ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ:-

| **ಘಟಕ** | **ಅಕ್ರಮ ವಲಸಿಗರ ಅಕ್ರಮ ವಾಸ್ತವ್ಯಕ್ಕೆ ಸಹಕರಿಸಿದವರ ಮೇಲೆ ದಾಖಲಾದ ಪ್ರಕರಣಗಳ ಸಂಖ್ಯೆ** | **ಅಕ್ರಮ ವಲಸಿಗರ ಅಕ್ರಮ ವಾಸ್ತವ್ಯಕ್ಕೆ ಸಹಕರಿಸಿದವರ ಸಂಖ್ಯೆ** |
|---|---|---|
| ಬೆಂಗಳೂರು ನಗರ | 1 | 1 |
| ಬೆಂಗಳೂರು ಜಿಲ್ಲೆ | 2 | 2 |
| ಮಂಗಳೂರು ನಗರ | 1 | 2 |
| ಉಡುಪಿ | 1 | 1 |
| **ಒಟ್ಟು** | **5** | **6** |

**ಸಂಖ್ಯೆ: ಒಇ 425 ಪಿಎಂಎಸ್ 2025**

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು